ಸುರೇಶ ಎಂ, ಕಲ್ಲಡ್ಕ
ಹಣೆಬರಹ ಎಲ್ಲಿದೆ?



ಪ್ರಜಾಪ್ರಭುತ್ವದಲ್ಲಂತೂ ಮತದಾರನ ಮಸಿಯಾಗುವ ಬೆರಳಲ್ಲಿ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಮನೆಯಲ್ಲಿ ಯಾರ ಪರವಾಗಿದ್ದರೆ ಉತ್ತಮ ರಾಮ್?
ಬಡಿಸುವವರ ಪರ.

ಮುರಳೀಧರ ಕುಲಕರ್ಣಿ, ಬೀದರ್
ರಾವಣನ ಕಾಲದ ಲಂಕೆಗೂ, ಈಗಿನ ಲಂಕೆಗೂ ಇರುವ ವ್ಯತ್ಯಾಸವೇನು?
ಆಗ ಸ್ವರ್ಣಮಯಿ ಆಗಿತ್ತು; ಈಗ ಸ್ವರ್ಣ ಮಾಯೆ ಆಗಿದೆ.

ಹೆಚ್.ವಿ. ಶ್ರೀಧರ್, ಬೆಂಗಳೂರು
ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಉಚಿತ ವಿಮಾನ ಪ್ರಯಾಣ ಎಂದು ಯಾವುದಾದರೂ ಪಕ್ಷ ಘೋಷಿಸಬಹುದೆ?




ವಿಮಾನ ಎಂದರೆ 'ಮಾನವಿಲ್ಲದವನು', 'ಶವ ಸಾಗಿಸುವ ಮಂಟಪ' ಎಂದೂ ಇರುವುದರಿಂದ, ಆಗಬಹುದು!

ಬಿ. ಚಂದ್ರೇಗೌಡ, ಬೆಂಗಳೂರು
ದೈಹಿಕ ಸೌಂದರ್ಯಕ್ಕೂ, ಬೌದ್ಧಿಕ ಸೌಂದರ್ಯಕ್ಕೂ ಏನು ವ್ಯತ್ಯಾಸ?
ದೈಹಿಕ ಸೌಂದರ್ಯಕ್ಕೆ ಆರೋಹಣ, ಅವರೋಹಣ ಉಂಟು; ಬೌದ್ಧಿಕದ್ದು ನಿರಂತರ ಆರೋಹಣ.

ಆರ್.ಎಸ್. ಲಕ್ಷ್ಮೀಕಾಂತ್, ಬೆಂಗಳೂರು
ಈಚೆಗೆ ದಿನಪತ್ರಿಕೆಗಳಲ್ಲಿ ಕೊಲೆ, ನಿಂದೆ, ಮೋಸದ ಸುದ್ದಿಗಳೇ ಜಾಸ್ತಿ. ಕಾರಣವೇನು?
ಅವನ್ನು ಆಸಕ್ತಿಯಿಂದ ಓದುವ ಓದುಗರು.

ಬೂಕನಕೆರೆ ವಿಜೇಂದ್ರ, ಮೈಸೂರು
ರಾಜ್ಯದಲ್ಲಿ ಈಗ ಎಲ್ಲೆಡೆ ಹೆಂಗಸರ 'ದರ್ಬಾರ್' ನಡೆಯುತ್ತಿದೆಯಲ್ಲ?
ಊಹೂಂ. ದಾನ/ಭಿಕ್ಷೆ ಪಡೆದವರದು ಬಾಡಿಗೆ ಶೋಕಿ. ನೀಡಿದವರದು ದರ್ಬಾರು.

ಅಂಚೆ ಸುಬ್ರಹ್ಮಣ್ಯ, ಕೊಪ್ಪ
ಇಲ್ಲೊಬ್ಬ ಕಂಡಕ್ಟರ್ 'ಮಹಿಳೆಯರಿಗೆ ಫ್ರೀ ಆದಮೇಲೆ ನನ್ನ ಕಲೆಕ್ಷನ್ ಇಲ್ಲ' ಅಂತಿದ್ದಾನಲ್ಲ...?
ತಾಳ್ಮೆ ಇರಲಿ. ಹೆಚ್ಚು ಝೀರೊ ಟಿಕೆಟ್‌ನಿಂದ ಕಿಕ್‌ಬ್ಯಾಕ್ ಪಡೆಯುವ ವ್ಯವಸ್ಥೆ ಬಂದೀತು.

ಮಲ್ಲಿಕಾರ್ಜುನ, ಸುರಧೇನುಪುರ
ಕಾಂಗ್ರೆಸ್ ಸರ್ಕಾರಕ್ಕೂ, ಮೋಡ ಬಿತ್ತನೆಗೂ ಏನು ಸಂಬಂಧ?
'ಗ್ಯಾರಂಟಿ'ಗಳ ಮೋಡ ಬಿತ್ತಿ ಭಾಗ್ಯಗಳ ಮಳೆ ಹರಿಸುತ್ತಾರಲ್ಲ!

ವಿ. ಹೇಮಂತಕುಮಾರ್, ಬೆಂಗಳೂರು
ಹೊರೆ ಹೊತ್ತಿದ್ದ ಮಹಿಳೆ ಹೊರೆಯನ್ನು ಬೇರೆಯವರಿಗಿತ್ತು ಬಸ್ಸು ಹತ್ತಿ ಹೋದಳಲ್ಲ...?
ಸುತ್ತಾಡಲಿ ಬಿಡಿ. ಹಸು ಎಲ್ಲೇ ಅಲೆದಾಡಿದರೂ ಕರುವಿನ ಕೂಗಿಗೆ ಓಗೊಡುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು
ಮಹಿಳೆಯರಿಗೆ ಮಾತ್ರ ಉಚಿತ ಪ್ರಯಾಣ ಎಂದರೆ ಪುರುಷರಿಗೆ ಅನ್ಯಾಯ ಮಾಡಿದಂತೆ ಅಲ್ಲವೆ?
ತಾನಾಗಿಯೇ ಒದಗಿರುವ ಗೃಹಸ್ವಾತಂತ್ರ್ಯವನ್ನು ನೀವಾಗಿಯೇ ಹೀಗೆ ಕೇಳಿ ಹಾಳು ಮಾಡಿಕೊಳ್ಳಬೇಡಿ.

ಸುರೇಶ್ ಬಿ.ವಿ. ಬೆಂಗಳೂರು
ನಿಜವಾದ ಮನೆಯೊಡತಿ ಸೊಸೆಯೋ, ಅತ್ತೆಯೋ?
ಉತ್ತರಕ್ಕೆ ಅವರ ಕಂಠಶ್ರೀಯ ಡೆಸಿಬಲ್ ಲೆವೆಲ್ ರಿಪೋರ್ಟ್ ಅವಶ್ಯ.

ಬಿ.ಸಂ. ಸುಬ್ಬಣ್ಣ, ಬೆಂಗಳೂರು
ಭಾಗ್ಯವೆಲ್ಲ ಮಹಿಳೆಯರಿಗೆ. ಗಂಡಿಗೆ 'ಗುಂಡಿನ ಭಾಗ್ಯ'ವಾದರೂ ಕೊಡಬಾರದೆ?
ಎಲೆಕ್ಷನ್ ಸಮಯದಲ್ಲಿ ಕೊಟ್ಟಿದ್ದರಲ್ಲ, ನೀವು ಕುಡಿಯಲಿಲ್ಲವೇನು?

## ವಾರದ ಪ್ರಶ್ನೆ

ರಾಜೀವ್ ಮಾಗಲ್, ಸಕಲೇಶಪುರ
ಮಹಿಳೆಯರಿಗೆ ಪುಕ್ಕಟೆ ಬಸ್ ಪ್ರಯಾಣ ಕೊಟ್ಟ ವ್ಯವಸ್ಥೆ ಶೌಚಾಲಯ ಬಳಕೆಗೆ ಬಿಡಿಗಾಸು ವಸೂಲಿ ಮಾಡುವುದೇಕೆ?
'ಸರ್ಕಾರದ ಆಡಳಿತವು ದುರ್ವಾಸನೆ ಬೀರುತ್ತಿದೆ' ಎಂಬ ಅಪವಾದವನ್ನು ತಪ್ಪಿಸಿಕೊಳ್ಳಲು.

ಭಾರತಿ ಗಂಗಾಧರ್, ಬೆಂಗಳೂರು
ಉಚಿತ ವಾಹನದ ಮಹಿಳಾ ಪ್ರಯಾಣಿಕರು ಗಂಡಸರ ಆಸನದಲ್ಲೂ ಆಸೀನರಾಗುವುದು ನ್ಯಾಯವೆ?
ಶಿವನ ಶಿರವನ್ನೇ ಏರಬಹುದಾದರೆ ಯಃಕಶ್ಚಿತ್ ಆಸನ ಯಾವ ಲೆಕ್ಕ ಎಂದಳಾ ಮಹಿಳೆ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಗಲ್ಲಿಗೇರಿಸುವ ಮುನ್ನ ಆತನ/ಆಕೆಯ ಕೊನೆಯ ಆಸೆ ಏನೆಂದು ಏಕೆ ಕೇಳುತ್ತಾರೆ?
ಸರ್ಕಾರಕ್ಕೆ ಒಬ್ಬನ ಆಸೆಯನ್ನಾದರೂ ಪೂರೈಸುವ ಆಸೆಯಂತೆ.

ಪಿ. ಜಯವಂತ ಪೈ, ಕುಂದಾಪುರ
ಪೊಲೀಸರಿಗೂ, ಶಿಕ್ಷಕರಿಗೂ ವ್ಯತ್ಯಾಸವೇನು?




ಗಲಾಟೆ ಮಾಡಿದವರನ್ನು ಅವರು ಚಚ್ಚಿ ಒಳಹಾಕುತ್ತಾರೆ, ಇವರು ಚಚ್ಚಿ ಹೊರಹಾಕುತ್ತಾರೆ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ
ಸಿಹಿಯೇ ಮಧುಮೇಹಕ್ಕೆ ಕಾರಣವಾಗಿರುವಾಗ ಪರಿಹಾರೋಪಾಯವನ್ನು ಸಿಹಿಸುದ್ದಿ ಎನ್ನುವುದೇಕೆ?
ಕಿವಿಗಾದರೂ ಸಿಹಿ ದಕ್ಕಲೆಂದು. ಮಧುಮೇಹಿಗೆ ತುಟಿ, ಕಣ್ಣು, ಕಿವಿಗೆ ಸಿಕ್ಕ ಸಿಹಿ ಅವರಿಗೆ ವರ್ಜ್ಯವಲ್ಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಸಿದ್ಧಿಗೂ, ಪ್ರಸಿದ್ಧಿಗೂ ಇರುವ ವ್ಯತ್ಯಾಸವೇನು?
ಸಿದ್ಧಿ ವ್ಯಕ್ತಿಯು ಸಮಾಜಕ್ಕಿತ್ತ ಕೊಡುಗೆ. ಪ್ರಸಿದ್ಧಿ ಸಮಾಜ ಕೊಡುವ ರಶೀದಿ.

■ ರಾಮ್